# ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊನ್ನಾಳಿ

## ಸಿ.ಸಿ.1588/2021

ಸಾಕ್ಷಿದಾರರ ಹೇಳಿಕೆಃ

| | | | |
|---|---|---|---|
| **ಹೆಸರು** | : | ಜನಾರ್ಧನ | ಚಾಸಾಃ **8** ಪ್ರಾಸಾಃ **8** |
| **ತಂದೆಯ ಹೆಸರು** | : | ನರಸಪ್ಪ | |
| **ವಯಸ್ಸು** | : | **65** ವರ್ಷ | |
| **ವೃತ್ತಿ** | : | ವ್ಯವಸಾಯ | |
| **ವಾಸಸ್ಥಳ** | : | ಹೊಳೆಹರಳಹಳ್ಳಿ ಗ್ರಾಮ | |

ದಿನಾಂಕಃ **12-12-2025** ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ :-ಮಾನ್ಯ ಸ.ಸ.ಅ. ರವರಿಂದ:-

ಚಾಸಾ-1 ಮತ್ತು 5 ನನ್ನ ತಮ್ಮಂದಿರು. ಆರೋಪಿತರು ಗೊತ್ತು. ಈಗ್ಗೆ ಸುಮಾರು 2-3 ವರ್ಷಗಳ ಹಿಂದೆ ಆರೋಪಿತರು ನಮಗೆ ಸೇರಿದ ಜಮೀನಿನಲ್ಲಿ ಕಲ್ಲುಗಳನ್ನು ಹಾಕಿದ್ದರು. ಆ ಸಮಯದಲ್ಲಿ ನಾನು ಮತ್ತು ಚಾಸಾ-1 ಮತ್ತು 5 ರವರು ಆರೋಪಿತರಿಗೆ ಕಲ್ಲುಗಳನ್ನು ತೆಗೆದುಕೊಳ್ಳಿ ಎಂದು ಹೇಳಿದಾಗ ಆರೋಪಿತರು ನಮ್ಮ ಜೊತೆ ಜಗಳ ಮಾಡಿ 1 ನೇ ಆರೋಪಿಯು ನನಗೆ ಕೋಲಿನಿಂದ ತಲೆಗೆ ಮತ್ತು ಬೆನ್ನಿಗೆ ಮತ್ತು ಚಾಸಾ-5 ರವರಿಗೆ ಬೆನ್ನಿಗೆ ಮತ್ತು ಮೈಗೈ, ಚಾಸಾ-1 ರವರಿಗೆ 2 ನೇ ಆರೋಪಿಯು ಕುಡುಗೋಲಿನಿಂದ ಹೊಡೆದಿರುತ್ತಾರೆ. ನಂತರ ಚಾಸಾ-1 ಮತ್ತು 5 ರವರನ್ನು ಬೈಕ್ ನಲ್ಲಿ ಹೊನ್ನಾಳಿ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದು ದಾಖಲು ಮಾಡಿರುತ್ತೇವೆ. ಪೊಲೀಸರಿಗೆ ಈ ಬಗ್ಗೆ ಹೇಳಿಕೆಯನ್ನು ಕೊಟ್ಟಿರುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮು.ಮಾ.1 ಮತ್ತು 2 ಮತ್ತು ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ. ರವರು ಅನುಮತಿ ಕೋರಿದ್ದಾರೆ. ಸೂಕ್ತ ಕಾರಣ ನೀಡಿದ ಮೇರೆಗೆ ಅನುಮತಿ ನೀಡಲಾಗಿದೆ.

<u>ಪಾಟೀ ಸವಾಲು :- ಮಾನ್ಯ ಸ.ಸ.ಅ. ರವರಿಂದ:-</u>

ಆರೋಪಿತರು ನನಗೂ, ಚಾಸಾ-1 ಮತ್ತು 5 ರವರಿಗೆ ಕೊಲೆ ಬೆದರಿಕೆಯನ್ನು ಹಾಕಿರುತ್ತಾರೆ ಎಂದರೆ ಸರಿ. ಆರೋಪಿತರು ನಮಗೆ ಕೆಟ್ಟ ಕೆಟ್ಟ ಪದಗಳಿಂದ ಬೈದಿದ್ದಾರೆ ಎಂದರೆ ಸರಿ.

<u>ಪಾಟೀ ಸವಾಲು :- ಆರೋಪಿತರ ಪರ ವಕೀಲರಿಂದಃ-</u>

ಚಾಸಾ-1 ಮತ್ತು 5 ನನ್ನ ತಮ್ಮಂದಿರು ಮತ್ತು 3 ಜನ ಅನ್ಯೋನ್ಯವಾಗಿದ್ದೇವೆ ಎಂದರೆ ಸರಿ. ನಮ್ಮ ಜಮೀನಿನ ಉತ್ತರ ದಿಕ್ಕಿಗೆ ಆರೋಪಿತರಿಗೆ ಸೇರಿದ ಜಮೀನು ಇರುತ್ತದೆ. ನಮ್ಮ ಮತ್ತು ಆರೋಪಿತರ ನಡುವೆ ಯಾವುದೇ ಗಲಾಟೆ ಆಗಿಲ್ಲ ಎಂದರೆ ಸರಿಯಲ್ಲ. ಗಲಾಟೆಯ ಸಮಯದಲ್ಲಿ ನಮ್ಮನ್ನು ಮತ್ತು ಆರೋಪಿತರನ್ನು ಹೊರತುಪಡಿಸಿ ಅಂದಾಜು 3-4 ಜನ ಇದ್ದರು ಅವರ ಹೆಸರು ನನಗೆ ನೆನಪಿಲ್ಲ. ನನಗೂ, ಚಾಸಾ-1 ಮತ್ತು 5 ರವರಿಗೆ ಆರೋಪಿತರು ಮು,ಮಾ.1 ಮತ್ತು 2 ರಿಂದ ಹೊಡೆದು ಯಾವುದೇ ಹಲ್ಲೆಯನ್ನು ಮಾಡಿಲ್ಲ ಎಂದರೆ ಸರಿಯಲ್ಲ. ನಾನು, ಚಾಸಾ-1 ಮತ್ತು 5 ರವರು ಬೈಕ್ ನಲ್ಲಿ ಬರುತ್ತಿದ್ದಾಗ ಸ್ವತಃ ಮಾಡಿಕೊಂಡ ಗಾಯಗಳೇ ಹೊರತು ಆರೋಪಿತರು ನಮಗೆ ಯಾವುದೇ ಹಲ್ಲೆಯನ್ನು ಮಾಡಿಲ್ಲ ಎಂದರೆ ಸರಿಯಲ್ಲ. ನಾವೇ ಸ್ವತಃ ಬೈಕ್ ನಿಂದ ಬಿದ್ದು ಗಾಯಗಳನ್ನು ಮಾಡಿಕೊಂಡು ಸುಳ್ಳು ಸಾಕ್ಷಿದಾರರನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ನಾನು ಮತ್ತು ಚಾಸಾ-1 ಮತ್ತು 5 ರವರು ಖಾಸ ಅಣ್ಣ ತಮ್ಮಂದಿರಾಗಿದ್ದು ಮತ್ತು ಆರೋಪಿತರ ಜಮೀನನ್ನು ಕ್ರಯಕ್ಕೆ ಪಡೆಯುವ ಉದ್ದೇಶದಿಂದ ಆರೋಪಿತರು ನಮಗೆ ಯಾವುದೇ ಹಲ್ಲೆಯನ್ನು ಮಾಡದಿದ್ದರೂ ಸಹ ಮಾಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮು.ಮಾ.1 ಮತ್ತು 2 ನಮಗೆ ಸೇರಿದ ವಸ್ತುಗಳು ಮತ್ತು ಮು.ಮಾ.1 ಮತ್ತು 2 ಕ್ಕೂ ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಆರೋಪಿತರು ನಮಗೆ ಕೆಟ್ಟ ಕೆಟ್ಟ ಪದಗಳಿಂದ ಬೈದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ನಮಗೆ ಯಾವುದೇ ಹಲ್ಲೆಯನ್ನು ಮಾಡದಿದ್ದರೂ ಸಹ ಚಾಸಾ-1 ಮತ್ತು 5 ರವರ ಮಾತುಕೇಳಿಕೊಂಡು ಪೊಲೀಸರಿಗೆ ಸುಳ್ಳು ಹೇಳಿಕೆ ನೀಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.